<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಇಂಡಿ ಇವರ ನ್ಯಾಯಾಲಯದಲ್ಲಿ .</u>

ಸಿ.ಸಿ. ನಂ: **:341/2017**

1. ಕರ್ನಾಟಕ ಸರ್ಕಾರ ಪರವಾಗಿ ಎಸ್.ಎಚ್.ಓ ಚಡಚಣ ಪೊಲೀಸ ಠಾಣೆ

.. ಫಿರ್ಯಾದುದಾರ

1. ಮಹಾಂತೇಶ ತಂಃ ನೀಲಪ್ಪಾ ಹೆರಕಾರ
ವಯಾಃ 25 ವರ್ಷ, ಉಃ ಕೂಲಿ
ಸಾಃ ಹತ್ತಳ್ಳಿ, ತಾಃ ಇಂಡಿ.

...ಆರೋಪಿ.

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆ:</u>**

**ಪ್ರಶ್ನೆ:1** ಈ ಪ್ರಕರಣದಲ್ಲಿಯ ಅಭಿಯೋಜನೆ ಪರ ಸಾಕ್ಷ್ಯಗಳನ್ನು ಕೇಳಿದ್ದೀರಾ ?

**ಉತ್ತರ** :

**ಪ್ರಶ್ನೆ :2** ಫ್ರಾಸಾ.1–ನಿಂಗಪ್ಪ ಹುಲೆಪ್ಪ ಪೂಜಾರಿ ಇವರು ತಮ್ಮ ಸಾಕ್ಷ್ಯದಲ್ಲಿ, ದಿಃ27.08.2016 ರಂದು ಬೆಳಿಗ್ಗೆ 6.30 ಗಂಟೆಗೆ ತಾನು ಠಾಣೆಯಲ್ಲಿದ್ದಾಗ, ತಮ್ಮ ಖಾಸಾ ಬಾತ್ಮಿದಾರರರಿಂದ ಹತ್ತಳ್ಳಿಗೆ ಹೋಗುವ ರಸ್ತೆಯ ಹತ್ತಿರ ಗೋಡಿಹಾಳ ಗ್ರಾಮದ ಕ್ರಾಸ ಹತ್ತಿರ ಒಬ್ಬ ಮಹಾಂತೇಶ ಹೇರೆಕಾರ ಎನ್ನುವ ವ್ಯಕ್ತಿಯು ಒಂದು ರಟ್ಟಿನ ಬಾಕ್ಸನಲ್ಲಿ ಸರಾಯಿ ಪೌಚುಗಳನ್ನು ತೆಗೆದುಕೊಂಡು ನಿಂತಿದ್ದಾನೆ ಎಂದು ಮಾಹಿತಿ ಬಂದಿದ್ದು, ಕೂಡಲೇ ಹಾಜರಿದ್ದ ತಮ್ಮ ಸಿಬ್ಬಂದಿಯವರಿಗೂ ಮಾಹಿತಿ ತಿಳಿಸಿ ಚಾಸಾ 4 ರವರ ಮುಖಾಂತರ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದು, ನಂತರ ಪಂಚರಿಗೆ ಸದರಿ ಬಾತ್ಮಿ ವಿಷಯವನ್ನು ತಿಳಿಸಿ, ಸದರಿ ವಿಷಯವನ್ನು ಮೇಲಾಧಿಕಾರಿಗಳಿಗೂ ಮಾಹಿತಿ ತಿಳಿಸಿ, ತಾವೆಲ್ಲರೂ ಬಾತ್ಮಿ ಬಂದ ಸ್ಥಳದ ಕಡೆಗೆ ಸರ್ಕಾರಿ ವಾಹನದಲ್ಲಿ 6.45 ಗಂಟೆಗೆ ಠಾಣೆಯಿಂದ ಹೊರಟೆವು. ಗೋಡಿಹಾಳ ಕ್ರಾಸ ಹತ್ತಿರ ತಮ್ಮ ವಾಹನವನ್ನು ಸ್ವಲ್ಪ ಮರೆಯಾಗಿ ನಿಲ್ಲಿಸಿ ವಾಚ್ ಮಾಡಿ ನೋಡಿದಾಗ ಅಲ್ಲಿ ಒಬ್ಬ ವ್ಯಕ್ತಿಯು ಒಂದು ರಟ್ಟಿನ ಬಾಕ್ಸನ್ನು ಹಿಡಿದುಕೊಂಡು ನಿಂತಿದ್ದು ಕಂಡುಬಂದಿದ್ದು ತಮಗೆ

ಸಂಶಯ ಬಂದು ಆತನಿಗೆ ಗೆರಾವು ಹಾಕಿ ಹಿಡಿದುಕೊಂಡು ಆತನ ಹೆಸರು ಕೇಳಿದಾಗ ಆತ ತನ್ನ ಹೆಸರು ಮಹಾಂತೇಶ ಹೇರೆಕಾರ ಅಂತಾ ಹೇಳಿದ್ದು, ಆತನ ಹತ್ತಿರ ಇದ್ದ ರಟ್ಟಿನ ಬಾಕ್ಸನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಅದರಲ್ಲಿ 180 ಎಮ್.ಎಲ್. ಅಳತೆಯ ಓ.ಟಿ. ವಿಸ್ಕಿಯ 28 ಪೌಚುಗಳಿದ್ದು, ಆತನಿಗೆ ಪರವಾನಿಗೆ ಬಗ್ಗೆ ಕೇಳಿದಾಗ ಆತನು ಮಾರಾಟ ಮಾಡಲು ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿದ್ದು, ನಂತರ ಸದರಿ ಮುದ್ದೆಮಾಲಿನಿಂದ ಒಂದನ್ನು ರಾ.ಪ. ಕುರಿತು ತೆಗೆದು, ಪಂಚನಾಮೆಯನ್ನು 7 ರಿಂದ 8 ಗಂಟೆಯವರೆಗೆ ಮಾಡಿ ಪಂಚನಾಮೆಗೆ ಪಂಚರ ಸಹಿ ಪಡೆದು, ನಂತರ ಮುದ್ದೆಮಾಲು ಮತ್ತು ಆರೋಪಿಯೊಂದಿಗೆ ಠಾಣೆಗೆ ಬಂದು ಸರ್ಕಾರದ ಪರವಾಗಿ ದೂರನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರ :

**ಪ್ರಶ್ನೆ :3** ಫ್ರಾಸಾ.2 ಎಸ್.ಜಿ. ಅನಂತಗೋಳ ಇವರು ತಮ್ಮ ಸಾಕ್ಷ್ಯದಲ್ಲಿ, ದಿಃ27.08.2016 ರಂದು ಬೆಳಿಗ್ಗೆ 6.30 ಗಂಟೆಗೆ ತಾನು, ಚಾಸಾ 5 ರಿಂದ 7 ಠಾಣೆಯಲ್ಲಿದ್ದಾಗ ಚಾಸಾ 1 ರವರು ತನ್ನನ್ನು ಕರೆದು ಇಬ್ಬರು ಪಂಚರಿಗೆ ಕರೆದುಕೊಂಡು ಬರಲು ತಿಳಿಸಿದ ಮೇರೆಗೆ ತಾನು ಚಾಸಾ 2 ಮತ್ತು 3 ರವರನ್ನು ಹಾಜರುಪಡಿಸಿ, ಹತ್ತಳ್ಳಿಗೆ ಹೋಗುವ ರಸ್ತೆಯ ಹತ್ತಿರ ಗೋಡಿಹಾಳ ಗ್ರಾಮದ ಕ್ರಾಸ ಹತ್ತಿರ ಒಬ್ಬ ಮಹಾಂತೇಶ ಹೇರೆಕಾರ ಎನ್ನುವ ವ್ಯಕ್ತಿಯು ಒಂದು ರಟ್ಟಿನ ಬಾಕ್ಸನಲ್ಲಿ ಸರಾಯಿ ಪೌಚುಗಳನ್ನು ತೆಗೆದುಕೊಂಡು ನಿಂತಿದ್ದಾನೆ ಎಂದು ಮಾಹಿತಿ ಬಂದಿದ್ದು ಎಂದು ತಮಗೆ ತಿಳಿಸಿದ್ದು, ತಾವೆಲ್ಲರೂ ಬಾತ್ಮಿ ಬಂದ ಸ್ಥಳದ ಕಡೆಗೆ ಸರ್ಕಾರಿ ವಾಹನದಲ್ಲಿ 6.45 ಗಂಟೆಗೆ ಠಾಣೆಯಿಂದ ಹೊರಟೆವು. ಗೋಡಿಹಾಳ ಕ್ರಾಸ ಹತ್ತಿರ ತಮ್ಮ ವಾಹನವನ್ನು ಸ್ವಲ್ಪ ಮರೆಯಾಗಿ ನಿಲ್ಲಿಸಿ ವಾಚ್ ಮಾಡಿ ನೋಡಿದಾಗ ಅಲ್ಲಿ ಒಬ್ಬ ವ್ಯಕ್ತಿಯು ಒಂದು ರಟ್ಟಿನ ಬಾಕ್ಸನ್ನು ಹಿಡಿದುಕೊಂಡು ನಿಂತಿದ್ದು ಕಂಡುಬಂದಿದ್ದು ತಮಗೆ ಸಂಶಯ

ಬಂದು ಆತನಿಗೆ ಗೆರಾವು ಹಾಕಿ ಹಿಡಿದುಕೊಂಡು ಆತನ ಹೆಸರು ಕೇಳಿದಾಗ ಆತ ತನ್ನ ಹೆಸರು ಮಹಾಂತೇಶ ಹೇರೆಕಾರ ಎಂದು ತಿಳಿಸಿದ್ದು, ಆತನ ಹತ್ತಿರ ಇದ್ದ ರಟ್ಟಿನ ಬಾಕ್ಸನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ ಅದರಲ್ಲಿ 180 ಎಮ್.ಎಲ್. ಅಳತೆಯ ಓ.ಟಿ. ವಿಸ್ಕಿಯ 28 ಪೌಚುಗಳಿದ್ದು, ಆತನಿಗೆ ಪರವಾನಿಗೆ ಬಗ್ಗೆ ವಿಚಾರಿಸಿದಾಗ ಆತನು ಮಾರಾಟ ಮಾಡಲು ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿದ್ದು, ನಂತರ ಸದರಿ ಮುದ್ದೆಮಾಲಿನಿಂದ ಒಂದನ್ನು ರಾ.ಪ. ಕುರಿತು ಚಾಸಾ 1 ರವರು ತೆಗೆದು ಪಂಚನಾಮೆಯನ್ನು 7 ರಿಂದ 8 ಗಂಟೆಯವರೆಗೆ ಪಂಚನಾಮೆ ಮಾಡಿ ಅದಕ್ಕೆ ಪಂಚರ ಸಹಿ ಪಡೆದು, ನಂತರ ಮುದ್ದೆಮಾಲು, ಪಂಚನಾಮೆ ಮತ್ತು ಆರೋಪಿಯೊಂದಿಗೆ ಠಾಣೆಗೆ ಹಾಜರಾಗಿ ಸರ್ಕಾರದ ಪರವಾಗಿ ಚಾಸಾ.1 ರವರು ದೂರನ್ನು ನೀಡಿರುತ್ತಾರೆ. ತಾನು ಈ ಕುರಿತು ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರ :

**ಪ್ರಶ್ನೆ:4** ಪ್ರಾಸಾ.4–ಕಲ್ಲಪ್ಪ ಕಾಶೀರಾಮ ಪಾಂಡ್ರೆ ಇವರು ತಮ್ಮ ಸಾಕ್ಷ್ಯದಲ್ಲಿ, ದಿಃ27.08.2016 ರಂದು ತಾನು ಎಸ್.ಎಚ್.ಓ. ಎಂದು ಕರ್ತವ್ಯ ನಿರ್ವಹಿಸುತ್ತಿರುವಾಗ, ಬೆಳಿಗ್ಗೆ 9 ಗಂಟೆಗೆ ಚಾಸಾ–1 ರವರು ಠಾಣೆಗೆ ಹಾಜರಾಗಿ ಸರ್ಕಾರದ ಪರವಾಗಿ ಒಂದು ದೂರನ್ನು ನೀಡಿದ್ದು, ಸದರಿ ದೂರಿನ ಆಧಾರದ ಮೇರೆಗೆ ಠಾಣಾ ಗುನ್ನಾ ನಂ.173/2016 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪ್ರ.ವ.ವ.ವನ್ನು ಕಳುಹಿಸಿ, ಆರೋಪಿಯನ್ನು ದಸ್ತಗೀರಿ ಮಾಡಿ ನ್ಯಾಯಾಂಗಬಂಧನದ ಕುರಿತು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟು, ಉಳಿದ 27 ಟೆಟ್ರಾ ಪಾಕೆಟಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಿ ಒಂದು ಟೆಟ್ರಾ ಪಾಕೆಟನ್ನು ರಾ.ಪ.ಗೆ ಕಳುಹಿಸಿಕೊಟ್ಟು, ಚಾಸಾ 4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡು, ದಿಃ27.12.2016 ರಂದು ರಾ.ಪ. ವರದಿಯನ್ನು ಪಡೆದುಕೊಂಡು ತನಿಖೆ

ಪೂರ್ಣಗೊಂಡ ನಂತರ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

**ಉತ್ತರ** :

**ಪ್ರಶ್ನೆ:5**. ಈ ಪ್ರಕರಣದಲ್ಲಿ ನಿಮಗೆ ಏನಾದರೂ ಹೇಳುವುದು ಇದೆಯಾ?

**ಉತ್ತರಃ**

**ಪ್ರಶ್ನೆ:6**. ಈ ಪ್ರಕರಣದಲ್ಲಿ ನೀವು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವಿರಾ ಮತ್ತು ಸಾಕ್ಷಿದಾರರನ್ನು ವಿಚಾರಣೆ ಮಾಡಲು ಇಚ್ಛಿಸುತ್ತೀರಾ?

**ಉತ್ತರಃ**

(ಇಂದು ದಿನಾಂಕ 29/07/2025 ರಂದು ಆರೋಪಿ ಮುಂದೆ ಬಹಿರಂಗ ನ್ಯಾಯಾಲಯದಲ್ಲಿ ಓದಿ ಹೇಳಿ ಅವರ ಉತ್ತರವನ್ನು ದಾಖಲು ಮಾಡಿಕೊಳ್ಳಲಾಯಿತು).

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,ಇಂಡಿ.